OS No.63/2020 PW-1

<u>ದಿನಾಂಕ **27.08.2024** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಲ್ ಎ ವಕೀಲರಿಂದಃ</u>

ದಾವಾ ಎ ಷಡ್ಯೂಲ್ ಸ್ವತ್ತು ನಮ್ಮ ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ದಾಖಲೆ ಹಾಜರು ಪಡಿಸಿರುತ್ತೇನೆ. ಈ ಬಗ್ಗೆ ಪಂಚಾಯತಿ ದಾಖಲೆಯನ್ನು ಹಾಜರಪಡಿಸಿರುತ್ತೇನೆ. ಪಾರಂ ನಂಬರ್ 12 ಮತ್ತು ಡಿಸಿಬಿ ರಿಜಿಸ್ಟರ್, ಅನ್ನು ಹಾಜರಪಡಿಸಿರುತ್ತೇನೆ. ನನ್ನ ತಂದೆಯ ಹೆಸರು ರಾಜುಗೌಡರವರ ಹೆಸರಿನಲ್ಲಿರುವ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸುಳ್ಳು. ನಿಪಿ-2 ರ ಡಿಸಿಬಿ ರಿಜಿಸ್ಟರ್ ನಲ್ಲಿ ನನ್ನ ತಂದೆಯ ಹೆಸರು ರಾಜುಗೌಡ ಎಂದು ನಮೂದಾಗಿಲ್ಲ ಎಂದರೆ ಸುಳ್ಳು. ನನ್ನ ತಂದೆಗೆ ಆಸ್ತಿ ಹೇಗೆ ಬಂತು ಎಂದು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಪಂಚಾಯತ್ ದಾಖಲೆಯ ಮೇಲೆ ದಾವಾ ಹಾಕಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿ-3 ರಿಂದ 7 ರ ಪ್ರಕಾರ ನನಗೆ ಯಾವುದೇ ದಾಖಲೆಗಳು ಕೊಟ್ಟಿಲ್ಲ ಎಂದು ಹಿಂಬರಹ ಕೊಟ್ಟಿದ್ದಾರೆಂದರೆ ಸುಳ್ಳು. ದಾವಾ ಎ ಷಡ್ಯೂಲ್ ಸ್ವತ್ತಿಗೆ ಸಂಬಂದಪಟ್ಟಂತೆ ಮೂಲ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸುಳ್ಳು.

2. ದಾವಾ ಬಿ ಷಡ್ಯೂಲ್ ಸ್ವತ್ತು 1 ನೇ ಪ್ರತಿವಾದಿಗೆ ಸೇರಿದೆ ಎಂದರೆ ಸುಳ್ಳು. ಸದರಿ ಸ್ವತ್ತನ್ನು 1 ನೇ ಪ್ರತಿವಾದಿಯ ತಾಯಿಯವರು ದಿಃ09.12.1976 ರಲ್ಲಿ ಖರೀದಿ ಮಾಡಿದ್ದಾರೆಂದರೆ ಗೊತ್ತಿಲ್ಲ. ಸದರಿ ಕ್ರಯ ಪತ್ರದ ಪ್ರಕಾರ ಈಗ 1 ನೇ ಪ್ರತಿವಾದಿಯ ಹೆಸರಿನಲ್ಲಿ ಖಾತಾ ಇದೆ ಎಂದರೆ ಸುಳ್ಳು. ಸದರಿ ಆಸ್ತಿಯಲ್ಲಿ 1 ನೇ ಪ್ರತಿವಾದಿಯವರು ಮನೆ ಕಟ್ಟಿದ್ದಾರೆಂದರೆ ಸುಳ್ಳು.

3. ದಾವಾ ಸಿ ಷಡ್ಯೂಲ್ ಸ್ವತ್ತನ್ನು 2 ನೇ ಪ್ರತಿವಾದಿ ಸಾಕಮ್ಮನವರ ಅತ್ತೆ ಈರಮ್ಮ ನವರು ದಿಃ09.02.1976 ರಂದು ಖರೀದಿ ಮಾಡಿರುತ್ತಾರೆಂದರೆ ಸುಳ್ಳು. ಸದರಿ ಕ್ರಯ ಪತ್ರದ ಪ್ರಕಾರ ಈಗ 2 ನೇ ಪ್ರತಿವಾದಿಯ ಹೆಸರಿನಲ್ಲಿ ಖಾತಾ ಇದೆ ಎಂದರೆ ಸುಳ್ಳು. ಸದರಿ ಆಸ್ತಿಯಲ್ಲಿ 2 ನೇ ಪ್ರತಿವಾದಿಯವರು ಮನೆ ಕಟ್ಟಿದ್ದಾರೆಂದರೆ ಸುಳ್ಳು.

4. ದಾವಾ ಡಿ ಷಡ್ಯೂಲ್ ಸ್ವತ್ತನ್ನು 3 ನೇ ಪ್ರತಿವಾದಿಯ ಗಂಡ ಮರೀಗೌಡರವರು ದಿಃ11.05.1992 ರಂದು ಖರೀದಿ ಮಾಡಿರುತ್ತಾರೆಂದರೆ ಸುಳ್ಳು. ಸದರಿ ಕ್ರಯ ಪತ್ರದ ಪ್ರಕಾರ ಈಗ 3 ನೇ ಪ್ರತಿವಾದಿಯ ಹೆಸರಿನಲ್ಲಿ ಖಾತಾ ಇದೆ ಎಂದರೆ ಸುಳ್ಳು. ಸದರಿ ಆಸ್ತಿಯಲ್ಲಿ 3 ನೇ ಪ್ರತಿವಾದಿಯವರು ಮನೆ ಕಟ್ಟಿದ್ದಾರೆಂದರೆ ಸುಳ್ಳು.

5. ದಾವಾ ಇ ಷಡ್ಯೂಲ್ ಸ್ವತ್ತನ್ನು 4 ನೇ ಪ್ರತಿವಾದಿಯ ಮಾವ ರಂಗಣ್ಣನವರು ದಿಃ09.02.1976 ರಂದು ಖರೀದಿ ಮಾಡಿರುತ್ತಾರೆಂದರೆ ಸುಳ್ಳು. ಸದರಿ ಕ್ರಯ ಪತ್ರದ ಪ್ರಕಾರ ಈಗ 4 ನೇ ಪ್ರತಿವಾದಿಯ ಹೆಸರಿನಲ್ಲಿ ಖಾತಾ ಇದೆ ಎಂದರೆ ಸುಳ್ಳು. ಸದರಿ ಆಸ್ತಿಯಲ್ಲಿ 4 ನೇ ಪ್ರತಿವಾದಿಯವರು ಮನೆ ಕಟ್ಟಿದ್ದಾರೆಂದರೆ ಸುಳ್ಳು.

ಈ ಮೇಲೆ ಹೇಳಿದ ಸದರಿ ಕ್ರಯ ಪತ್ರಗಳ ಪ್ರಕಾರ ಪ್ರತಿವಾದಿಗಳು ಸ್ವಾಧೀನದಲ್ಲಿದ್ದಾರೆಂದರೆ ಸುಳ್ಳು. ಪ್ರತಿವಾದಿಯವರಿಗೆ ಆದ ಕ್ರಯ ಪತ್ರಗಳನ್ನು ಎಲ್ಲಿಯೂ ಪ್ರಶ್ನೆ ಮಾಡಿಲ್ಲ ಎಂದರೆ ಪಿರ್ಯಾದು ನೀಡಿರುತ್ತೇವೆ ಎಂದು ನುಡಿಯುತ್ತಾರೆ. ಅದೇ ರೀತಿ ಖಾತಾಗಳನ್ನು ಪ್ರಶ್ನೆ ಮಾಡಿಲ್ಲ ಎಂದರೆ ಸುಳ್ಳು. ದಾವಾದ ಎಲ್ಲಾ ಸ್ವತ್ತುಗಳು ಮೂಲತಃ ಪುಟ್ಟಸ್ವಾಮಿರವರಿಗೆ ಸೇರಿದ್ದು ಎಂದರೆ ಸುಳ್ಳು. ದಾವಾದ ಎಲ್ಲಾ ಸ್ವತ್ತುಗಳನ್ನು 1943 ರಲ್ಲಿ ಪುಟ್ಟಸ್ವಾಮಿರವರು ಕ್ರಯ ಮಾಡಿದ್ದಾರೆಂದರೆ ಸುಳ್ಳು ಈ ಕ್ರಯ ಆದಾಗ ಆಸ್ತಿ ಸರ್ವೆ ನಂಬರ್ ನಲ್ಲಿತ್ತು ಎಂದರೆ ಸುಳ್ಳು. ಸದರಿ ಆಸ್ತಿಯಲ್ಲಿ ನಿವೇಶನಗಳನ್ನು ಮಾಡಿ ಪುಟ್ಟಸ್ವಾಮಿರವರು ಮಾರಾಟ ಮಾಡಿರುತ್ತಾರೆಂದರೆ ಸುಳ್ಳು.

6. ನನ್ನ ತಾಯಿಯ ಹೆಸರು ಚನ್ನಮ್ಮ. ನನ್ನ ತಾಯಿ ದಿಃ09.02.1976 ರಲ್ಲಿ ವಿಸ್ತೀರ್ಣ 45*48 ಸ್ವತ್ತನ್ನು ಖರೀದಿ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ . ವಕೀಲರು ಕ್ರಯ ಪತ್ರವನ್ನು ತೋರಿಸಿದಾಗ ತಿರಸ್ಕರಿಸುತ್ತಾರೆ.

7. ದಾವಾ ಸಂಖ್ಯೆ 70/2006 ಅನ್ನು ನಾನು ಮತ್ತು ನನ್ನ ತಮ್ಮ ಸೇರಿ ಹಾಕಿರುತ್ತೇವೆ. ಈ ದಾವಾ ಆಸ್ತಿಯ ವಿಸ್ತೀರ್ಣ 45*48 ಎಂದರೆ ಸುಳ್ಳು. ದಾವಾ ಬಿ ಯಿಂದ ಇ ಷಡ್ಯೂಲ್ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಅಲ್ಲ ಮತ್ತು ಪ್ರತಿವಾದಿಗೆ ಸೇರಿದ್ದು ಎಂದರೆ ಸುಳ್ಳು. ಈ ಆಸ್ತಿಗಳು ದಾವಾ ಎ ಆಸ್ತಿಯ ಭಾಗ ಅಲ್ಲ ಎಂದರೆ ನಿಜ. ನಾವು ದಾವಾ ಎ ಷಡ್ಯೂಲ್ ಸ್ವತ್ತಿನ ಮಾಲೀಕರಲ್ಲ ಎಂದರೆ ಸುಳ್ಳು. ಪ್ರತಿವಾದಿಯವರಿಗೆ ದಾವಾ ಆಸ್ತಿಯಲ್ಲಿ ಇರಲು ಅನುಮತಿ ಕೊಟ್ಟ ದಾಖಲೆ ಬಗ್ಗೆ

ಕೇಳಿದಾಗ ಸಾಕ್ಷಿಯು ನನ್ನ ತಂದೆ ಯಾವುದೇ ಅನುಮತಿ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಈ ಬಗ್ಗೆ ವಾದ ಪತ್ರದಲ್ಲಿ ತಿಳಿಸಿರುವ ವಿಷಯ ಸುಳ್ಳು ಇದೆ ಎಂದರೆ ಸುಳ್ಳು. ಸಾಕ್ಷಿ ಪ್ರಮಾಣ ಪತ್ರದಲ್ಲಿರುವ ವಿಷಯುಗಳು ಸುಳ್ಳು ಇದೆ ಎಂದರೆ ಸುಳ್ಳು. ದಾವಾ ಆಸ್ತಿಯಲ್ಲಿ ಪ್ರತಿವಾದಿಯವರು ಸ್ವಾದೀನದಲ್ಲಿದ್ದಾರೆಂದರೆ ಸುಳ್ಳು. ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸುಳ್ಳು.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.